ಪರಿಶೀಲನೆ ಮಾಡಿ ಎಲ್ಲಾ ಸಂಘ ಸಂಸ್ಥೆಗಳವರನ್ನು ಮತ್ತು ನಮ್ಮನ್ನು ಕರೆಯಿಸಿ ಕನ್‌ವಿನ್ಸ್ ಮಾಡಿ ಎಂದು ನಾನು ಹೇಳುತ್ತಿದ್ದೇನೆ.

+**ಶ್ರೀ ಕೆ. ಎನ್. ನಾಗೇಗೌಡ** :- ಮಾನ್ಯ ಪುಟ್ಟಣ್ಣಯ್ಯನವರು ಬಹಳ ತಿಳುವಳಿಕೆ ಉಳ್ಳವರು. ನಾನು ವಿಂಡಿತವಾಗಿಯೂ ಅವರನ್ನು ಕರೆದು ಕೇಳುತ್ತೇನೆ, ಟಿಕ್ನಿಕಲ್ ಎಕ್ಸ್‌ಪರ್ಟ್ ಎಷ್ಟು ಜನರನ್ನು ಬೇಕಾದರೂ ಕೇಳೋಣ. ಎಲ್. ಅಂಡ್ ಟಿ. ಯವರನ್ನು ಕೇಳೋಣ. ಶ್ರೀ ಕೆ. ಸಿ. ರೆಡ್ಡಿಯವರು ನಮ್ಮ ರಾಜ್ಯದ ಟಿಕ್ನಿಕಲ್ ಬೋರ್ಡ್ ಛೇರ್ಮನ್ ಆಗಿದ್ದಾರೆ, ಮೊನ್ನೆ ನಾನು, ಮಾನ್ಯ ಚೌಡಯ್ಯನವರು ಮತ್ತು ಅವರು ಸುಮಾರು ಒಂದು ಗಂಟೆಗಳ ಕಾಲ ಚರ್ಚೆ ಮಾಡಿದ್ದೇವೆ. ನಿಮ್ಮನ್ನೂ ಕರೆಯಿಸಿ ಮಾತನಾಡುತ್ತೇನೆ. ಆದರೆ ತೀರ್ಮಾನ ವೇನು ಮಾಡಿದ್ದಾರೆ, ಆ ತೀರ್ಮಾನವನ್ನು ಇವತ್ತು ಬದಲಾಯಿಸುವುದಕ್ಕೆ ಸಾಧ್ಯವಿಲ್ಲ. ಜನವರಿ 1997 ರಿಂದ ನೀರು ನಿಲ್ಲಿಸಬೇಕಾಗುತ್ತದೆ. ಎಷ್ಟು ದಿವಸ ಶಾರ್ಟೇಜ್ ಕಡಿಮೆ ಮಾಡಬಹುದು, how many days we can reduce in the duration of closure ಎಂಬುದನ್ನು ನೋಡೋಣ. ಭದ್ರಾ ಮತ್ತು ತುಂಗಾ ವಿಷಯವನ್ನು ಕುರಿತು ಅವರು ಹೇಳಿದರು. ಭದ್ರಾದಲ್ಲಿ ಮತ್ತು ತುಂಗಾದಲ್ಲಿ ನಾನು ಎರಡೂ ಸ್ಪಡಿ ಮಾಡಿ ನೋಡಿದ್ದೇನೆ. ಭದ್ರಾದಲ್ಲಿ, ತುಂಗಾದಲ್ಲಿ ಅವರು ಸರಿಯಾಗಿ ಪ್ರಿ-ಪ್ಲಾನ್ ಮಾಡಿರಲಿಲ್ಲ ಅವರಲ್ಲಿ ನೀರು ನಿಲ್ಲಿಸುವುದರಲ್ಲಿ ಜಿಜ್ಞಾಸೆ ಇತ್ತು. ತುಂಗಾದಲ್ಲಿ 20 ದಿವಸ ನೀರು ಕೊಡದೇ ಹೋಗಿದ್ದರೆ, ಹೋದ ವರ್ಷ 1995 ರಲ್ಲಿ ಕ್ಲೋಸರ್ ಪಿರಿಯಡ್ ಮಾಡದೇ ಹೋಗಿದ್ದರೆ, ಇಷ್ಟು ಹೊತ್ತಿಗೆ ನಾವು ನೀರು ಕೊಡುತ್ತಿದ್ದೇವು. ಆ ನೀರನ್ನು ಕೊಡುವುದರಲ್ಲಿ ಜಿಜ್ಞಾಸೆ ಇದ್ದುದರಿಂದ ಅದು ಮುಂದಕ್ಕೆ ಹೋಯಿತು. ಆದರೆ ಈಗ ನಮಗೆ ಇನ್ನೂ ಐದು ಆರು ತಿಂಗಳು ಇದೆ. ಐದು ತಿಂಗಳಲ್ಲಿ ಮಾಡುವಂತಹ ಎಲ್ಲಾ ಪ್ಲಾನ್ಸ್ ಇದೆ, ನಾನು ಮಾಡಿ ಕೊಡುತ್ತೇನೆ. ನಾನು ಅವರಿಗೆ ಪೂರ್ತಿಯಾಗಿ ಕನ್‌ವಿನ್ಸ್ ಮಾಡುತ್ತೇನೆ. ಇನ್ನೂ ಐದು ತಿಂಗಳು ಕಾಲ ಇದೆ, ಆದರಲ್ಲಿ ಎಲ್ಲಾ ಇನ್‌ಫ್ರಾಸ್ಟ್ರಕ್ಚರ್ ಅನ್ನು ಮಾಡಿ, ಎಲ್ಲಾ ರೀತಿಯ ನಮ್ಮ ವೀಕ್ಲಿ ಪ್ರೋಗ್ರಾಂ, ಮಂತ್ಲಿ ಪ್ರೋಗ್ರಾಂ, ಶೆಡ್ಯೂಲ್ ಪ್ರೋಗ್ರಾಮ್ಸ್, ಫೈನಾನ್ಷಿಯಲ್ ಮತ್ತು ಫಿಜಿಕಲ್ ಟಾರ್ಗೆಟ್ ಎಲ್ಲಾ ಟೇಬಲ್ ಮಾಡಿ ನಾನು ಕೊಟ್ಟಿದ್ದೇನೆ. ಆದರಲ್ಲಿ ಯಾವುದೇ ಆದಂತಹ ಅನುಮಾನ ಇಲ್ಲ. ಇದನ್ನು ಕಂಪ್ಲೀಟ್ ಮಾಡತಕ್ಕಂತಹ ಪೂರ್ಣ ವಿಶ್ವಾಸ ನಮಗಿದೆ. ನಮ್ಮ ಟಿಕ್ನಿಕಲ್ ಎಕ್ಸ್‌ಪರ್ಟ್ಸ್‌ಗೂ ಇದೆ. ಅವರಿಗೂ ನಾನು ಕನ್‌ವಿನ್ಸ್ ಮಾಡುತ್ತೇನೆ. ನಾನು ಅವರ ರೂಮಿಗೆ ಹೋಗಿ, ಇವತ್ತು ಅಥವಾ ನಾಳೆ ಕುಳಿತು, ಎಲ್ಲಾ ಪ್ಲಾನ್ ಮತ್ತು ಸ್ಕೆಚ್‌ಗಳನ್ನು ಅವರಿಗೆ ತೋರಿಸಿ, ಮಾನ್ಯ ಸದಸ್ಯರನ್ನೂ ನಾಲೆಗೆ ಕರೆದುಕೊಂಡು ಹೋಗಿ ಅಲ್ಲಿನ ಕಾರ್ಯ ತೋರಿಸಿ, ಅವರನ್ನು ಕನ್‌ವಿನ್ಸ್ ಮಾಡುತ್ತೇನೆ. ನನಗೆ ಆ ವಿಶ್ವಾಸ ಇದೆ. ದಯವಿಟ್ಟು ಮಾನ್ಯ ಸದಸ್ಯರು ಅದನ್ನು ಒಪ್ಪಿಕೊಳ್ಳಲಿ. ಜನವರಿಯಿಂದ ನೀರು ನಿಲ್ಲಿಸುತ್ತೇವೆ ಎಂದು ತಿಳಿಸುತ್ತೇನೆ.

(ಅ) ದಕ್ಷಿಣ ಕನ್ನಡ ಜಿಲ್ಲೆಯ ವಾಮಂಜೂರಿನಲ್ಲಿ ಒಂದೇ ಕುಟುಂಬದ ನಾಲ್ವರ ಅಮಾನುಷರಾಗಿ ಹತ್ಯೆ.

ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) :- ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲ್ಲೂಕಿನ ವಾಮಂಜೂರಿನಲ್ಲಿ ಎರಡು ವರ್ಷಗಳ ಹಿಂದೆ

ಒಂದೇ ಕುಟುಂಬದ ನಾಲ್ವರನ್ನು ಅಮಾನುಷವಾಗಿ ಹತ್ಯೆ ನಡೆಸಿ, ಪೋಲೀಸರು ವಿಚಾರಣೆ ಗೋಸ್ಕರ ಮಂಗಳೂರು ಜೈಲಿಗೆ ಆಪರಾಧಿಯನ್ನು ಕರೆದುಕೊಂಡು ಬರುವಾಗ, ಪೊಲೀಸರ ಸಮಕ್ಷಮದಲ್ಲಿ ಆಪರಾಧಿಯು ತಪ್ಪಿಸಿಕೊಂಡು ಒಂದು ವರ್ಷ ಕಳೆದರೂ ಸಹ ಸರ್ಕಾರವು ಯಾವ ಕ್ರಮವನ್ನೂ ಕೈಗೊಳ್ಳದಿರುವ ಬಗ್ಗೆ ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತಿದ್ದೇನೆ.

ದಿನಾಂಕ 23-2-1994 ರ ರಾತ್ರಿ ಶ್ರೀಮತಿ ಆಪ್ಪಿ (75 ವರ್ಷ) ಇವರು ಮೂಡುಶೆಡ್ಡೆ, (ಮಂಗಳೂರು ಕಸಬಾ ಹೋಬಳಿ) ತಮ್ಮ ಮನೆಯಲ್ಲಿ ಮಗಳು ಶಕುಂತಲ 20 ವರ್ಷ, ಮಗ ಗೋವಿಂದ 21 ವರ್ಷ, ಮೊಮ್ಮಗಳು ದೀಪಿಕ 8 ವರ್ಷ ಅವರೊಂದಿಗೆ ಮಲಗಿದ್ದಾಗ, ದುಷ್ಕರ್ಮಿಗಳು ಮುಂಬಾಗಿಲನ್ನು ತಳ್ಳಿ ಒಳಬಂದು ನಾಲ್ವರನ್ನು ಕೊಲೆ ಮಾಡಿ ಮನೆಯಲ್ಲಿದ್ದ ಬೆಲೆ ಬಾಳುವ ವಸ್ತುಗಳನ್ನು ದೋಚಿರುತ್ತಾರೆ. ಇದರ ಸಂಬಂಧವಾಗಿ ವಾಮಂಜೂರು ವಾಸಿ ಶ್ರೀ ಎಸ್. ಸುರೇಶ್ ಕುಮಾರ್ ಅವರ ಫಿರ್ಯಾದಿನ ಮೇಲೆ ಮಂಗಳೂರು ಗ್ರಾಮಾಂತರ ಪೋಲೀಸ್ ಠಾಣೆ ಮೊಕದ್ದಮೆ ಸಂಖ್ಯೆ 46 : 94 ಕಲಂ 449, 302, 380 ಭಾ.ದಂ.ಸಂ.ದಲ್ಲಿ ಕೊಲೆ ಪ್ರಕರಣವನ್ನು ದಿನಾಂಕ 24-2-1994 ರಂದು ದಾಖಲಿಸಿಕೊಳ್ಳಲಾಗಿದೆ. ಸದರಿ ಕೃತ್ಯಕ್ಕೆ ಸಂಬಂಧಿಸಿದಂತೆ ಆಪರಾಧಿ ಪ್ರವೀಣ ಉರುಫ್ ಪ್ರವೀಣ್ ಕುಮಾರ್ (ತಂದೆ ರಾಮಕೃಷ್ಣ, ಉಪ್ಪಿನಂಗಡಿ) ಪಡಿಯಡ್ಕ ವಾಸಿ (ಮೃತ ಆಪ್ಪಿಯ ತಮ್ಮನ ಮಗ) ಇವರನ್ನು ದಿನಾಂಕ 2-3-1994 ರಂದು ದಸ್ತಗಿರಿ ಮಾಡಿದ್ದು, ಈ ಕೃತ್ಯಕ್ಕೆ ಸಂಬಂಧಿಸಿದ ಕಳವು ಮಾಲು ಚಿನ್ನ ಮತ್ತು ನಗದು ಹಣ ಎಲ್ಲಾ ಸೇರಿ ಒಟ್ಟು ರೂ. 83,815-00 ಗಳನ್ನು ವಶಪಡಿಸಿಕೊಳ್ಳಲಾಗಿದೆ. ದಿನಾಂಕ 30-5-1994 ರ ವರೆಗೆ ಮಂಗಳೂರಿನಲ್ಲಿ ನ್ಯಾಯಾಂಗ ಬಂಧನದಲ್ಲಿದ್ದ ಆಪರಾಧಿಯನ್ನು ನಂತರ ಬೆಳಗಾವಿ ಕಾರಾಗೃಹದಲ್ಲಿಡಲಾಗಿತ್ತು.

ದಿನಾಂಕ 19-2-1995 ರಂದು ಆಪರಾಧಿಯನ್ನು ಮಂಗಳೂರು ಸತ್ರ ನ್ಯಾಯಾಲಯದ ಮುಂದೆ ದಿನಾಂಕ 26-2-95 ರಂದು ಹಾಜರ್ಪಡಿಸಲು ಬೆಳಗಾವಿಯ ಪೋಲೀಸ್ ಉಸ್ತುವಾರಿಯಲ್ಲಿ ಬೆಳಗಾವಿ ಜೈಲಿನಿಂದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸಿನಲ್ಲಿ ಕಳುಹಿಸಲಾಗಿರುತ್ತದೆ. ಸದರಿ ಬೆಂಗಾವಲು ಪೇದೆಗಳು ಆಪರಾಧಿಯೊಂದಿಗೆ ದಿನಾಂಕ 19-2-1995 ರಂದು ಬೆಳಗಾವಿಯಿಂದ ಹೊರಟು ರಾತ್ರಿ 7.45 ಕ್ಕೆ ಸದರಿ ಬಸ್ಸಿನ ಚಾಲಕ ಹುಬ್ಬಳ್ಳಿಯ ಗ್ರೀನ್ ಪಾರ್ಕ್ ಹೋಟೆಲಿನ ಮುಂದೆ ಬಸ್ಸನ್ನು ಊಟಕ್ಕಾಗಿ ನಿಲ್ಲಿಸಿದ್ದು, ಊಟದ ನಂತರ ಸದರಿ ಪೊಲೀಸರು ರಾತ್ರಿ 8.30 ಕ್ಕೆ ಹೋಟೆಲಿನಿಂದ ಹೊರಬಂದಾಗ ಕೈಕೋಳ ಹಾಕಿದ್ದ ಆಪರಾಧಿಯು ಪೊಲೀಸರ ವಶದಿಂದ ತಪ್ಪಿಸಿಕೊಂಡು ಹೋಗಿರುತ್ತಾನೆ. ಕೂಡಲೇ ಪೊಲೀಸರು ತಪ್ಪಿಸಿಕೊಂಡ ಆಪರಾಧಿಯ ಪತ್ತೆಗಾಗಿ ಹುಬ್ಬಳ್ಳಿ ನಗರದಲ್ಲಿ ಎಲ್ಲಾ ರೀತಿಯ ಪ್ರಯತ್ನ ನಡೆಸಿ, ದಿನಾಂಕ 20-2-95 ರಂದು ಆಪರಾಧಿ ಪತ್ತೆಗಾಗಿ ಮಂಗಳೂರಿಗೆ ಬಂದಿರುತ್ತಾರೆ. ಆಪರಾಧಿಯ ಪತ್ತೆಗಾಗಿ ದಿನಾಂಕ 22-2-1995 ರ ವರೆಗೆ ದಕ್ಷಿಣ ಕನ್ನಡ ಜಿಲ್ಲೆ ಪೊಲೀಸರೊಂದಿಗೆ ಸರ್ವ ಪ್ರಯತ್ನ ನಡೆಸಿದ್ದು, ಪ್ರಯತ್ನ ವಿಫಲಗೊಂಡ ಕಾರಣ ಮಂಗಳೂರು ಪೂರ್ವ ಠಾಣೆ ಮೊಕದ್ದಮೆ ಸಂಖ್ಯೆ : 92 : 95 ಕಲಂ 224 ಭಾ.ದಂ.ಸಂ. ಪ್ರಕಾರ ಪ್ರಕರಣವನ್ನು ದಿನಾಂಕ 22-2-1995 ರಂದು ರಾತ್ರಿ 8.30ಕ್ಕೆ ದಾಖಲಿಸಿಕೊಂಡಿದ್ದು, ನಂತರ ಪ್ರಕರಣವನ್ನು ಸರಹದ್ದಿನ ಆಧಾರದ ಮೇಲೆ ಕುಂದಗೊಳ

ಠಾಣೆಗೆ ಮುಂದಿನ ಕ್ರಮಕ್ಕಾಗಿ ವರ್ಗಾಯಿಸಲಾಗಿರುತ್ತದೆ. ದಿನಾಂಕ 23-2-1995 ರಂದು ಅಪರಾಧ ಸಂಖ್ಯೆ : 17 : 95 ಕಲಂ 224 ಭಾ.ದಂ.ಸಂ. ಪ್ರಕಾರ ದಾಖಲಾತಿ ಮಾಡಲಾಗಿದೆ.

ಅಪರಾಧಿಯ ತನಿಖೆಗಾಗಿ ಪೊಲೀಸ್ ಅಧೀಕ್ಷಕರು, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರು ದಿನಾಂಕ 28-2-1995 ರಂದು ಕರ್ನಾಟಕ ಎಲ್ಲಾ ಜಿಲ್ಲಾ ಪೊಲೀಸ್ ಅಧೀಕ್ಷಕರುಗಳಿಗೆ ದೂರ ಮುದ್ರಣ ಸಂದೇಶವನ್ನು ಕಳುಹಿಸಿ ಅಪರಾಧಿಯ ಪತ್ತೆಗಾಗಿ ತೀವ್ರ ಶೋಧನೆ ನಡೆಸಲು ತಿಳಿಸಿರುತ್ತಾರೆ.

ಅಪರಾಧಿಯ ವಿವರಗಳನ್ನೊಳಗೊಂಡ ಕರ ಪತ್ರಗಳನ್ನು ಮುದ್ರಿಸಿ ಪ್ರಚಾರ ಮಾಡಲಾಗಿದೆ. ಮತ್ತು ಅಪರಾಧ ದಳವನ್ನು ಮುಂಬೈ, ಪೂನಾ, ಮೈಸೂರು, ಬೆಂಗಳೂರು, ಕಾರವಾರ, ಭಟ್ಕಳ, ಹುಬ್ಬಳ್ಳಿ-ಧಾರವಾಡ ಮುಂತಾದ ಸ್ಥಳಗಳಿಗೆ ಅಪರಾಧಿಯನ್ನು ಪತ್ತೆ ಹಚ್ಚುವ ಸಲುವಾಗಿ ನೇಮಿಸಿದೆ. ದೂರದರ್ಶನ ಮತ್ತು ಆಕಾಶವಾಣಿಗಳಿಗೆ ವ್ಯಾಪಕ ಪ್ರಚಾರ ಮಾಡುವಂತೆ ಪತ್ರ ಬರೆಯಲಾಗಿದೆ. ಅಪರಾಧಿಯ ಹೆಂಡತಿ ಮತ್ತು ಸಂಬಂಧಿಕರ ಮನೆಯ ಹತ್ತಿರ ನಿರಂತರ ನಿಗಾ ಇಡಲಾಗಿದೆ.

ಈ ಪ್ರಕರಣದ ತನಿಖೆಯನ್ನು ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರವರು ಆದೇಶ ಸಂಖ್ಯೆ : ಸಿಆರ್‌ಎಂ : 29 : ಡಿಕೆ : 95 ದಿನಾಂಕ 16-6-1995 ರ ಪ್ರಕಾರ ಸಿಒಡಿಯು 10-6-1995 ರಂದು ಮಹಿಸಿಕೊಂಡ ಪೊಲೀಸ್ ಅಪರಾಧಿಯೊಬ್ಬರಿಂದ ತನಿಖೆ ನಡೆಸಲಾಗಿರುತ್ತದೆ. ಅಪರಾಧಿಯು ಮುಂಚೆ ಮುಂಬೈನಲ್ಲಿ ವಾಸವಾಗಿದ್ದ ಕಾರಣ ತನಿಖಾಧಿಕಾರಿ ಸಿಬ್ಬಂದಿಯೊಂದಿಗೆ ಮುಂಬೈಗೆ ಭೇಟಿ ನೀಡಿ ಅಪರಾಧಿಯ ಪತ್ತೆಗಾಗಿ ಸಾಕಷ್ಟು ಪ್ರಯತ್ನ ಪಟ್ಟಿರುತ್ತಾರೆ. ಅಪರಾಧಿಯ ಚಲನ ವಲನದ ಬಗ್ಗೆ ನಿಗಾ ವಹಿಸಲು ಮುಂಬೈ ಪೊಲೀಸರನ್ನು ಸಹ ಕೋರಲಾಗಿದೆ.

ಬೆಳಗಾವಿ ಪೊಲೀಸ್ ಅಧೀಕ್ಷಕರು ದಿನಾಂಕ 24-2-1995 ರಂದು ಸಶಸ್ತ್ರ ಪೊಲೀಸ್ ರುಗಳಾದ 458 ಭಾಸ್ಕ, 378 ಕೆ. ಕೆ. ದಾಮಣಿ ಮತ್ತು 403 ಎಂ. ಎಸ್. ಬನೇಜ್ ಇವರುಗಳನ್ನು ಕರ್ತವ್ಯ ನಿರ್ಲಕ್ಷತೆ ದೋಷಾರೋಪಣೆ ಆಧಾರದ ಮೇಲೆ ಅಮಾನತ್ತಿನಲ್ಲಿಡಲಾಗಿದ್ದು ಇಲಾಖಾ ವಿಚಾರಣೆಯು ಮುಕ್ತಾಯ ಹಂತದಲ್ಲಿರುತ್ತದೆ.

+ **ಶ್ರೀ ಜಯರಾಮಶೆಟ್ಟಿ** :- ಸನ್ಮಾನ್ಯ ಅಧ್ಯಕ್ಷರೇ, 23-2-1994 ರಂದು ಮಂಗಳೂರಿನ ವಾಮಂಜೂರಿನ ಒಂದೇ ಕುಟುಂಬದ ಮನೆಯಲ್ಲಿ ಅದೇ ಕುಟುಂಬದ ಸದಸ್ಯ ರಾತ್ರಿ ಹೊತ್ತು ಹಣಕ್ಕೋಸ್ಕರ ಅಥವಾ ಮಧ್ಯವ್ಯಸನಿ ಹಾಗೂ ಒಂದಂಕಿ ಲಾಟರಿಯ ದುರ್ವ್ಯಸನಿ ಆಗಿರುವುದರಿಂದ ಹಣದ ಆಸೆಗೋಸ್ಕರ ಅವರದೇ ಕುಟುಂಬದ ನಾಲ್ಕು ಜನರನ್ನು ಅಮಾನುಷವಾಗಿ ಕೊಂದಿದ್ದಾನೆ, ದಕ್ಷಿಣ ಕನ್ನಡ ಜಿಲ್ಲಾ ಪೋಲಿಸರು ಬಹಳಷ್ಟು ಶ್ರಮ ಪಟ್ಟು ಒಂದು ವಾರದ ಒಳಗೆ ಅಪರಾಧಿಯನ್ನು ಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ. ಯಶಸ್ವಿಯಾಗಿ ಅವನನ್ನು ಬೆಳಗಾಂ ಕಾರಾಗೃಹಕ್ಕೆ ಕಳುಹಿಸಿಕೊಟ್ಟು ಒಂದು ವರ್ಷದವರೆಗೆ ಮಂಗಳೂರುನಿಂದ ಬೆಳಗಾಂ ಜೈಲಿಗೆ ತೆಗೆದುಕೊಂಡು ಹೋಗುವಾಗ ದಕ್ಷಿಣ ಕನ್ನಡ ಜಿಲ್ಲಾ ಪೋಲಿಸರು ಅವನ ಕೈಗೆ ಕೋಳವನ್ನು ಹಾಕಿ ಅವನು ಯಾವುದೇ ರೀತಿಯಲ್ಲಿ ತಪ್ಪಿಸಿಕೊಂಡು ಹೋಗುವುದುಕ್ಕೆ ಕೂಡದು ಎಂಬ ರೀತಿಯಲ್ಲಿ

ಪೋಲೀಸ್ ವ್ಯಾನ್ ಬದಿಗೆ ಅವನನ್ನು ಕಟ್ಟಿಹಾಕಿ ಅವನ ಕೈಯಲ್ಲಿ ಕೋಳವನ್ನು ಹಿಡಿದು ಕೊಂಡು ಬಹಳಷ್ಟು ಜಾಗೃತೆಯಲ್ಲಿ ಬೆಳಗಾಂ ಜೈಲಿಗೆ ಕಳುಹಿಸಿಕೊಟ್ಟಿದ್ದರು. ಆದರೆ ವಿಚಾರಣೆಗೋಸ್ಕರ ಒಂದು ವರ್ಷದ ನಂತರ 19-2-1995 ರಂದು ಬೆಳಗಾಂನಿಂದ ಮಂಗಳೂರಿಗೆ ತೆಗೆದುಕೊಂಡು ಬರುವಾಗ ಮೂರು ಜನ ಸಶಸ್ತ್ರ ಪೋಲೀಸರು ಇದ್ದಾರೆ, ಕೈಗೆ ಕೋಳವನ್ನು ಕೂಡ ಹಾಕಿದ್ದು, ಮಾನ್ಯ ಮಂತ್ರಿಗಳು ಏನು ಹೇಳುತ್ತಿದ್ದಾರೆ, ಗ್ರೀನ್ ವ್ಯೂ ಹೋಟೆಲ್‌ನಲ್ಲಿ ಊಟದ ಸಮಯಕ್ಕೆ ಅವನನ್ನು ಅಲ್ಲಿ ಊಟ ಮಾಡುವುದಕ್ಕೆ ತೆಗೆದುಕೊಂಡು ಹೋಗಿದ್ದರು. ಊಟ ಆದ ನಂತರ ಕೂಡ ಅವನ ಕೈಯಲ್ಲಿ ಕೋಳ ಇತ್ತು. ಆ ನಂತರ ಅವನು ಮೂತ್ರ ವಿಸರ್ಜನೆಗೋಸ್ಕರ ಸಮಯ ಕೇಳಿದ ಬಗ್ಗೆ ಅವನನ್ನು ಒಟ್ಟಿಗೆ ಪಕ್ಕದ ಗೋಡೆ ಹತ್ತಿರ ಕರೆದುಕೊಂಡು ಹೋದರು. ಅಲ್ಲಿಂದ ಅವನು ಹಾರಿ ಓಡಿ ಹೋಗಿದ್ದಾನೆ ಎಂದು ಸರ್ಕಾರ ಹೇಳುತ್ತಿದೆ. ಇದು ಎಷ್ಟು ಸಮಂಜಸ ಮೂರು ಜನ ಸಶಸ್ತ್ರ ಪೋಲೀಸ್‌ನವರು ಇರುವಾಗ ಕೈಗೆ ಕೋಳ ಇರುವಾಗ ಅವನು ಆ ಬೇಲಿಯನ್ನು ಹಾರಿಕೊಂಡು ಹೋಗುವುದು, ಅವನನ್ನು ಹಿಡಿಯುವುದಕ್ಕೆ ಸಾಧ್ಯತೆ ಇಲ್ಲ ಎಂದು ಹೇಳುವುದು ಸತ್ಯಕ್ಕೆ ದೂರವಾದ ಮಾತು. ಇದು ಪೋಲೀಸರ ನಿಷ್ಕ್ರಿಯತೆಯಿಂದ ಇದು ಆಗಿದೆ. ಅದು ಆಗಿ ಕೂಡ ಸುಮಾರು ಒಂದು ವರ್ಷದ ಹತ್ತಿರ ಆಯಿತು. ಪೋಲೀಸರು ರಕ್ಷಕ ಯಾವ ಜಾಣಾಕ್ಷತೆಯಿಂದ ಅವನ್ನು ಹಿಡಿಯುವುದಕ್ಕೆ ವ್ಯವಸ್ಥೆ ಮಾಡಿಕೊಂಡಿದ್ದಾರೆ? ನನಗೆ ಗೊತ್ತಿದ್ದ ಹಾಗೆ ಜೈಲಿಗೆ ಹೋಗುವಾಗ ಬಹಳಷ್ಟು ಕೃಷವಾಗಿದ್ದ ಸಪ್ರವಾಗಿದ್ದ. ನನಗೆ ಪರಿಚಯ ಇದೆ, ಅವರ ತಾಯಿ ಒಂದು ಮನೆ ನನ್ನ ಗ್ರಾಮದ ಹತ್ತಿರ ಇದೆ. ಆದರೆ ಒಂದು ವರ್ಷ ಬೆಳಗಾಂ ಜೈಲಿನಿಂದ ವಾಪಸ್ ಮಂಗಳೂರು ಜೈಲಿಗೆ ಕರೆದುಕೊಂಡು ಬರುವ ಸಂದರ್ಭದಲ್ಲಿ ಅವನು ದಷ್ಟಪುಷ್ಟ ಆಗಿದ್ದ. ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ, ಪೋಲೀಸ್‌ನವರ ನಿಷ್ಕ್ರಿಯತೆಯಿಂದ ಇಲ್ಲದಿದ್ದರೆ ಪೋಲೀಸ್‌ನವರ ಸಹಕಾರದಿಂದ ಹೀಗೆ ಆಗಿದೆ. ಅವನು ಏನೂ ಅಷ್ಟು ಶ್ರೀಮಂತ ಅಲ್ಲ. ಅವನ ಕುಟುಂಬದವರು ಅವನ ಸ್ನೇಹಿತರು ಪೂರ್ತಿ ಶ್ರೀಮಂತರು ಅಲ್ಲ. ಇದಕ್ಕೋಸ್ಕರ ಊರಿನಲ್ಲಿ ಹೇಳುತ್ತಿದ್ದಾರೆ, ಈ ಪರಾರಿಯಾಗಿದ್ದ ಪ್ರವೀಣನ ಜೊತೆಗೆ ಭೂಗತ ಜಗತ್ತಿನ ಯಶಸ್ವಿ ಕಾರ್ಯಾಚರಣೆ ಮಾಡುತ್ತಿದೆ. ಇವನ ಬಗ್ಗೆ ಅದಕ್ಕೋಸ್ಕರ ಪೋಲೀಸ್‌ನವರು ಕೆಲಸ ಮಾಡುತ್ತಿಲ್ಲ. ಆದುದರಿಂದ ಅವನನ್ನು ಹಿಡಿಯುವ ಕೆಲಸ ಆಗಲಿಲ್ಲ ಎಂದು. ನಾನು ಸಿಂಧ್ಯ ಸಾಹೇಬರು ಗೃಹ ಮಂತ್ರಿ ಇದ್ದಾಗ ಅವರಿಗೆ ಮನವಿ ಕೊಟ್ಟಿದ್ದೆ. ಅವರು ತಕ್ಷಣ ಸಿ.ಒ.ಡಿ.ಗೆ ಇದನ್ನು ತನಿಖೆಗೆ ತೆಗೆದುಕೊಳ್ಳುತ್ತೇವೆ ಎಂದು ಹೇಳಿ ಯಶಸ್ವಿಯಾಗಿ ಮಾಡಿಕೊಂಡಿದ್ದಾರೆ. ಆ ನಂತರ ಕೂಡ ಸಿ.ಒ.ಡಿ.ಗೆ ತನಿಖೆಯಿಂದ ಏನಾಗಿದೆ; ಏನೂ ಆಗಲಿಲ್ಲ. ಇದರ ಅರ್ಥ ಇದರ ಹಿಂದೆ ಏನೋ ಒಂದು ಕೈವಾಡ ಇದೆ. ಸರ್ಕಾರ ಏನೋ ಮುಚ್ಚಿಡುತ್ತಿದೆ. ಆದ್ದರಿಂದ ಒಂದು ಕುಟುಂಬದ ನಾಲ್ಕು ಜನರನ್ನು ಕೊಂದ ನಂತರ ಪೋಲೀಸ್‌ನವರ ನಿಷ್ಕ್ರಿಯತೆಯಿಂದ ಕೂಡ ಅವನನ್ನು ಹಿಡಿಯುವುದಕ್ಕೆ ಆಗಿದಿದ್ದರೆ, ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ; ಯಾವ ಸಮಯದಲ್ಲಿ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ಎಂಬುದನ್ನಾದರೂ ಹೇಳುತ್ತೀರೋ? ಅಮಾನತ್ತು ಮಾಡುತ್ತೇವೆಂದು ಹೇಳಿದ್ದೀರಿ, ಮೊನ್ನೆ ನನಗೆ ಉತ್ತರ ಕೊಡುವಾಗ 10-5-96 ಕ್ಕೆ ಅವರನ್ನು ಕೆಲಸಕ್ಕೆ ವಾಪಸ್ ತೆಗೆದುಕೊಂಡಿದ್ದೀರಿ. ಆದರೆ ಕೊಲೆಗಾರ ಪತ್ತೆ ಆಗಿಲ್ಲ. ಇದಕ್ಕೆ ಯಾರು ಹೊಣೆ ಈ ಬಗ್ಗೆ ತಾವು ಸ್ಪಷ್ಟೀಕರಣ ಕೊಡಬೇಕು.

ಶ್ರೀ ಆರ್. ರೋಷನ್ ಬೇಗ್ :- ಮಾನ್ಯ ಉಪ-ಸಭಾಧ್ಯಕ್ಷರೇ, ನಾನು ಡೀಟೇಲ್ಡ್ ರಿಪೋರ್ಟ್ ಓದಿದ್ದೇನೆ, ಸರ್ಕಾರಕ್ಕೆ ಯಾರೋ ಒಬ್ಬ ನಾಲ್ಕು ಜನರನ್ನು ಕೊಲೆ ಮಾಡಿದ ಮನುಷ್ಯನನ್ನು ಬಚಾವ್ ಮಾಡಬೇಕೆಂದು ಆಸೆ ಇಲ್ಲ. ಮಂಗಳೂರು ಜೈಲಿನಲ್ಲಿ ಇದ್ದ, ಮಂಗಳೂರು ಜೈಲಿನಲ್ಲಿ ಒಂದು ಮರ್ಡರ್ ಆಯಿತು ಎಂದು, ಬೆಳಗಾಂ ಜೈಲಿನಿಂದ ಮಂಗಳೂರಿಗೆ ಹೋಗುತ್ತಿರುವಾಗ ಪೋಲೀಸರಿಗೆ ಕೈಕೊಟ್ಟು ಓಡಿ ಹೋಗಿದ್ದಾನೆ. ಆ ಸಮಯದಲ್ಲಿಯೂ ಸಹ ಅವನು ಹ್ಯಾಂಡ್ ಕಫ್ಸ್‌ನಲ್ಲಿ ಇದ್ದ. ಪೋಲಿಸರಿಗೆ ಕೈ ಕೊಟ್ಟು ಓಡಿ ಹೋಗಿದ್ದಾನೆ. ಅವರಿಗೆ ನಾವು ಇಮ್ಮಿಡಿಯಟ್ ಆಗಿ ಸಸ್ಪೆಂಡ್ ಮಾಡಿದ್ದೇವೆ, ಈಗ ಏನಾಗಿದೆ ಸಿ.ಒ.ಡಿ.ಗೆ ಎಂಟ್ರಸ್ಟ್ ಮಾಡಿದ್ದೇವೆ. ಸಿ.ಒ.ಡಿ.ಯವರಿಗೆ ಎಂಟ್ರಸ್ಟ್ ಮಾಡಿದ ಮೇಲೆ ಸಿ.ಒ.ಡಿ. ಆಫೀಸರ್ಸ್ ಬಾಂಬೆಗೆ ಹೋಗಿ, ಬಾಂಬೆಯಲ್ಲಿ ಎಲ್ಲಾ ಕಡೆ ಸರ್ಚ್ ಮಾಡಿದ್ದಾರೆ. All the Airports have been alerted. All a migration Centers and Airports, Imigration officials have been alerted. ಅವರಿಗೆಲ್ಲಾ ಅಲರ್ಟ್ ಮಾಡಿದ್ದೇವೆ. ಇಂತಹವನು ಎಲ್ಲಾದರೂ ಕಂಡರೆ ಇಮ್ಮೀಡಿಯಟ್ಟಾಗಿ ಅರೆಸ್ಟ್ ಮಾಡಿ ಎಂದು ಹೇಳಿದ್ದೇವೆ. ಸಾಕಷ್ಟು ಪ್ರಯತ್ನ ಪಟ್ಟಿದ್ದೇವೆ. ಇವತ್ತು ಇಲ್ಲ ನಾಳೆ ಹಿಡಿಯುತ್ತೇವೆ. ಅವನಿಗೆ ಖಂಡಿತ ನಾವು ಹಿಡಿಯುತ್ತೇವೆ. ಎಲ್ಲಿ ಓಡಿ ಹೋಗುತ್ತಾನೆ; ನಾವು ಅವನಿಗೆ ಮುಚ್ಚಿಡುತ್ತೇವೆ. ನಾವು ಅವನಿಗೆ ಏನು ಹೈಡ್ ಮಾಡುತ್ತಿದ್ದೇವೆ ಎಂದು ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆ, ಅದು ಸರಿ ಇಲ್ಲ.

ಚುನಾವಣಾ ಪ್ರಸ್ತಾವ

ವಿಷಯ :- ಬೆಂಗಳೂರು ವಿಶ್ವವಿದ್ಯಾನಿಲಯದ ಸೆನೆಟ್‌ಗೆ ಒಬ್ಬ ಸದಸ್ಯರನ್ನು ಚುನಾಯಿಸುವ ಬಗ್ಗೆ.

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಪ್ರಚಾರ ಮಂತ್ರಿಗಳು) :- ಮಾನ್ಯ ಅಧ್ಯಕ್ಷರೇ, 1976 ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಶಾಸನದ 21(1) (14) ನೇ ಕಲಮಿನ ಮೇರೆಗೆ ಅವಶ್ಯಪಡಿಸಿರುವಂತೆ ಏಕಲ ಸಂಕ್ರಮಣೀಯ ಮತದ ಮೂಲಕ ಅನುಪಾತ ಪ್ರಾತಿನಿಧ್ಯದ ನೀತಿಗೆ ಅನುಸಾರವಾಗಿ ಈ ಸಭೆಯು ಬೆಂಗಳೂರು ವಿಶ್ವವಿದ್ಯಾನಿಲಯದ ಸೆನೆಟ್‌ಗೆ ಒಬ್ಬರು ಸದಸ್ಯರನ್ನು ಅವಧಿಗೆ ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಪ್ರಸ್ತಾವ ಮಂಡಿಸಲ್ಪಟ್ಟಿತು.

ಉಪಾಧ್ಯಕ್ಷರು :- ಈಗ ಬೇಡಿಕೆಗಳ ಮೇಲೆ ಚರ್ಚೆಯನ್ನು ಮುಂದುವರೆಸುವುದು.

+ **ಶ್ರೀ ಜೆ. ಎ. ಫರ್ನಾಂಡೀಸ್** (ನಾಮಕರಣ ಸದಸ್ಯರು) :- ಸನ್ಮಾನ್ಯ ಉಪಾಧ್ಯಕ್ಷರೇ, with your kind permission, I will speak in English.

Sir, the President of India has okayed the Motor Vehicles Act to bring in private vehicles along with the public sector undertaking. A certain degree of competition between the private and